ಸಾಕ್ಷಿ ಯನ್ನು ದಿಃ 22.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ನಾನು ಹುಟ್ಟಿ ಬೆಳೆದದ್ದು ಸುಂಡವಾಳು ಗ್ರಾಮದಲ್ಲಿ ಎಂದರೆ ಸರಿ.
2. ನನಗೆ ದೂರುದಾರರು ಚೆನ್ನಾಗಿ ಪರಿಚಯ ಇದ್ದಾರೆ.
3. ನಾನು ದೂರುದಾರರ ಹತ್ತಿರ ಹಣವನ್ನು ಪಡೆದುಕೊಂಡಿಲ್ಲ.
4. ದೂರುದಾರರು ನಮ್ಮ ಮನೆಗೆ ಆಗಾಗ ಬರುತ್ತಾ ಇರುತ್ತಾರೆ. ದಿನಾಂಕ ಮತ್ತು ತಾರೀಖು ನನಗೆ ಗೊತ್ತಿಲ್ಲ. ದೂರುದಾರರು ನಮ್ಮ ಮನೆಗೆ ಎಷ್ಟು ಬಾರಿ ಬಂದಿದ್ದಾಗೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ದೂರುದಾರರು ನನಗೆ ಪರಿಚಯ ಇದ್ದರಿಂದ ಅವರ ಸಮಸ್ಯೆಯನ್ನು ಹೇಳಿಕೊಂಡು ನಮ್ಮ ಮನೆಗೆ ಆಗಾಗ ಬರುತ್ತಿದ್ದರು.
5. ದೂರದಾರರು ನನ್ನ ಬಳಿ ಒಂದು ಚೆಕ್ ನ್ನು ಮಾತ್ರ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ವಿಚಾರವಾಗಿ ನಾನು ಪೊಲೀಸರಿಗೆ ದೂರನ್ನು ನೀಡಿದ್ದೀರಾ ಎಂದರೆ, ಸಾಕ್ಷಿಯು ಸದರಿ ವಿಚಾರ ನನಗೆ ನ್ಯಾಯಾಲಯದಲ್ಲಿ ಸಮನ್ಸ ಬಂದಾಗ ನನಗೆ ಗೊತ್ತಾಗಿರುತ್ತದೆ.
6. ವಕೀಲರ ಮೂಲಕ ನನಗೆ ಯಾವುದೇ ನೋಟಿಸ್ ಬಂದಿಲ್ಲ.
7. ನಾನು ಕನ್ನಡ ಭಾಷೆಯಲ್ಲಿ ಸಹಿಯನ್ನು ಮಾಡುತ್ತೇನೆ.
8. ನಿಪಿ.1 ರ ಚೆಕ್ ನನ್ನದೇ.
9. ಸಾಕ್ಷಿಗೆ 313 ಅಡಿಯ ಹೇಳಿಕೆಯಲ್ಲಿರುವ ಸಹಿಯನ್ನು ಮತ್ತು ಆರೋಪಿತಯ ವಕಾಲತಗಳಲ್ಲಿ ಇರುವ ಸಹಿಯನ್ನು ತೋರಿಸಲಾಗಿ, ಸಾಕ್ಷಿಯವರು ಸಹಿ ನನ್ನದೇ ಎಂದು ಒಪ್ಪಿಕೊಂಡಿರುತ್ತಾರೆ
10. ನಿಪಿ.5 ರಲ್ಲಿ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ನನ್ನದಲ್ಲ ಎಂದು ಹೇಳಿರುತ್ತಾರೆ.
11. ಮಹೇಶ ಬಿನ್ ಲೇಟ್ ರಾಜಣ್ಣ, ವಾಟರ್ ಮ್ಯಾನ್, ಸುಂಡವಾಳು ಗ್ರಾಮ ಎಂದರೇ ನೀವು ಎಂದರೆ ಸರಿ.
12. ನನಗೆ ಯಾವುದೇ ನೋಟಿಸ್ ಮತ್ತು ಅಂಚೆ ಬರುವುದಾದರೇ ಸದರಿ ವಿಳಾಸಕ್ಕೆ ಬರುತ್ತವೆ.
13. ನಿಪಿ.5 ಮೇಲೆ ಹೇಳಿದ ವಿಳಾಸಕ್ಕೆ ಬಂದಿದೆ ಎಂದರೆ, ಸಾಕ್ಷಿಯು ಡೈರಿ ಪಕ್ಕದ ಮನೆ ಎಂದು ಬರುತ್ತದೆ ಎಂದು ನುಡಿಯುತ್ತಾರೆ.

14. ನಾನು ಬ್ಯಾಂಕ್ ನಲ್ಲಿ ಖಾತೆಯನ್ನು ತೆಗೆದಿದ್ದೇನೆ. ಬ್ಯಾಂಕ್ ಖಾತೆಯನ್ನು ತೆಗೆಯುವಾಗ ನಾನು ಮೇಲೆ ಹೇಳಿದಂತೆ ವಿಳಾಸವನ್ನು ನೀಡಿಲ್ಲ, ಅವರು ಕೇಳಿದರೆ ಅದೇ ರೀತಿಯಾಗಿ ನೀಡುವೆ.
15. ನನ್ನ ಆಧಾರ ಕಾರ್ಡ್ ನಲ್ಲಿ ನನ್ನ ವಿಳಾಸ ಮಹೇಶ, ಬಿನ್ ಲೇಟ್ ರಾಜು, ವಾಸ. ಸುಂಡವಾಳು ಗ್ರಾಮ ಅಂತ ಇದೆ.
16. ನಿಮ್ಮ ವಿಳಾಸಕ್ಕೆ ವಕೀಲರ ನೋಟಿಸ್ ಬಂದಿದ್ದು, ನೀವು ಸಹಿ ಮಾಡಿ ಅದನ್ನು ಪಡೆದಿದದ್ದಿರೂ, ಸಹ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದೀರಾ ಎಂದರೆ ಸರಿಯಲ್ಲ.
17. ನಿಪಿ.1 ರ ಚೆಕ್ ನಲ್ಲಿರುವ ಸಹಿ ನಿಮ್ಮದೆಯಾ ಎಂದರೆ, ಸಾಕ್ಷಿಯ ನನ್ನದಲ್ಲ ನುಡಿಯುತ್ತಾರೆ.
18. ನಿಪಿ.1 ರ ಚೆಕ್ ನಲ್ಲಿರುವ ಸಹಿ ನಿಮ್ಮದಿದ್ದರೂ, ನೀವು ದೂರುದಾರರಿಗೆ ಹಣವನ್ನು ಪಾವತಿ ಬೇಕಾಗಿ ಬರುತ್ತದೆ ಅಂತ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.
19. ನಾನು ಬ್ಯಾಂಕ್ ಮಾನ್ಯೆಜರ್ ರವರು ಸಾಕ್ಷಿದಾರರನ್ನಾಗಿ ಮಾಡಲು ಅವಶ್ಯಕತೆ ಇಲ್ಲ.
20. ನಿಪಿ.1 ರ ಚೆಕ್ ರಲ್ಲಿರುವ ಸಹಿ ನಿಮ್ಮದಾಗಿಲ್ಲ ಎಂದರೆ, ಬ್ಯಾಂಕ್ ನವರು ಸಹಿ ವ್ಯತ್ಯಾಸ ಎಂದು ಹಿಂಬರಹವನ್ನು ನೀಡುತ್ತಿದ್ದರು. ಆ ಸಹಿ ನಿಮ್ಮದಾಗಿದ್ದರಿಂದ, ಅವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ನೀಡಿದ್ದಾರೆ.
21. ನಿಪಿ.1 ರ ಚೆಕ್ ನಲ್ಲಿರುವ ಸಹಿ ನಿಮ್ಮದಲ್ಲ ಎಂದು ನ್ಯಾಯಾಲಯದ ಮುಖಾಂತರ ಮಾದರಿ ಸಹಿಯನ್ನು ಕಂಡು ಹಿಡಿದುಕೊಳ್ಳಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ, ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ.
22. ನಾನು ಬೇರೆ ಯಾರ ಜೊತೆ ಚೆಕ್ ನ ವ್ಯವಹಾರ ಮಾಡಿಲ್ಲ.
23. ನೀವು ನಿಮ್ಮ ಅವಶ್ಯಕತೆಗಾಗಿ ದಿಃ 13.12.2019 ರಂದು ದೂರುದಾರರಿಂದ ರೂ. 2 ಲಕ್ಷ ಹಣವನ್ನು ಸಾಲವನ್ನಾಗಿ ಪಡೆದುಕೊಂಡಿದ್ದೀರಾ ಎಂದರೆ, ಸಾಕ್ಷಿಯ ನಾನು ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

24.ದೂರುದಾರರು ನಿಮಗೆ ಹಣವನ್ನು ವಾಪಸ್ಸು ಕೇಳಿದಾಗ, ನೀವು ನಿಪಿ.1 ರ ಚೆಕ್ ನ್ನು ದಿಃ 13.01.2020 ರ ದಿನಾಂಕ ಚೆಕ್ ನ್ನು ಸಹಿ ಮಾಡಿ ಕೊಟ್ಟಿರುತ್ತೀರಾ ಎಂದರೆ ಸರಿಯಲ್ಲ.

25. ದಿಃ 14.01.2020 ರಲ್ಲಿ ದೂರುದಾರರು ಸ್ಟೇಟ ಬ್ಯಾಂಕ ಆಪ ಇಂಡಿಯಾ, ಪಿರಿಯಾಪಟ್ಟಣ ಶಾಖೆಯ ಮೂಲಕ ಹಣವನ್ನು ಪಡೆಯಲು ಹೋದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿಃ 17.01.2020 ರಲ್ಲಿ ಬ್ಯಾಂಕ್ ನವರು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

26. ಸದರಿ ಹಿಂಬರಹವನ್ನು ಪಡೆದು ದೂರರುದಾರರನ್ನು ಬಂದು ಸದರಿ ವಿಚಾರವನ್ನು ತಿಳಿಸಿ, ನಿಮ್ಮ ಬಳಿಹಣವನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ.

27. ನೀವು ಹಣ ಹಿಂದಿರುಗಿಸದ ಕಾರಣ, ದೂರುದಾರರು ನಿಮಗೆ ವಕೀಲರ ಮೂಲಕ ನಿಮಗೆ ದಿಃ 24.01.2020 ರಲ್ಲಿ ನೋಟಿಸ್ ನ್ನು ನೀಡಿರುತ್ತಾರೆ ನಎಂದಂರೆ ಸರಿಯಲ್ಲ. ಸದರಿ ನೋಟಿಸ್ ನ್ನು ನೀವು ದಿಃ 07.02.2020 ರಲ್ಲಿ ಖುದ್ದಾಗಿ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ.

28.ನೀವು ದೂರುದಾರರಿಗೆ ಹಣವನ್ನು ನೀಡದ ಕಾರಣ, ಅವರಿಗೆ ಮೋಸವನ್ನು ಮಾಡಿದ್ದರಿಂದ ಈ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

29.ಸಾಕ್ಷಿಗೆ ನ್ಯಾಯಾಲಯದ ಮುಖಾಂತರ ನೀಡಲಾದ ನೋಟಿಸ್ ನಲ್ಲಿರುವ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ನನ್ನದೇ ಎಂದು ನುಡಿದಿರುತ್ತಾರೆ.

30.ನಿಪಿ.5 ಸ್ವೀಕೃತಿ ಯಲ್ಲಿರುವ ವಿಳಾಸ ನಿಮ್ಮದೇ ಎಂದರೆ ಸರಿ.

31.ನಿಪಿ.1 ರ ಚೆಕ್ ಮತ್ತು ನಿಪಿ.5 ನೋಟಿಸ್ ರಲ್ಲಿರುವ ಸಹಿಗಳು ನಿಮ್ಮದೇ ಆಗಿದ್ದರೂ ಸಹ, ನೀವು ಹಣವನ್ನು ಪಾವತಿ ಮಾಡಬೇಕಾಗಿ ಬರುತ್ತದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

32.ದೂರುದಾರರು ನಿಮ್ಮ ಮನೆಗೆ ಬಂದಿಲ್ಲ, ನೀವೇ ಖುದ್ದಾಗಿ ಅವರ ಹತ್ತಿರ ಹೋಗಿ ಸಾಲವನ್ನು ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ.

33.ದೂರುದಾರರು ಕೇಸನ್ನು ವಾಪಸ್ಸು ಪಡೆಯುತ್ತೇವೆ ಎಂದು ನಿಮಗೆ ಹೇಳದೇ ಇದ್ದರೂ ಸಹ ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

34. ನೀವು ಈ ಪ್ರಕರಣಕ್ಕಾ ಗಿ ಮುಖ್ಯ ವಿಚಾರಣೆಯಲ್ಲಿ ಸುಳ್ಳುಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ